# ಕೋಪೆನ್‌ಹೇಗನ್ ಎನ್ನುವ 'ಸೈಕಲ್ ನಗರಿ'




**ಸೈಕಲ್ ಪ್ರೀತಿಯಲ್ಲಿ ಹಾಗೂ ಶ್ವಾನ ಮೋಹದಲ್ಲಿ ಡೆನ್ಮಾರ್ಕ್‌ನ ನಾಗರಿಕರನ್ನು ಮೀರಿಸುವವರಿಲ್ಲ. ಕೋಪೆನ್‌ಹೇಗನ್‌ನಲ್ಲಂತೂ ಜನರಿಗಿಂತಲೂ ಸೈಕಲ್‌ಗಳ ಸಂಖ್ಯೆಯೇ ಹೆಚ್ಚು. ಜನಸಾಮಾನ್ಯರು ಮಾತ್ರವಲ್ಲ, ಯುವರಾಜನೂ ಸೈಕಲ್ ತುಳಿಯುವುದು ಅಲ್ಲಿನ ವಿಶೇಷ.**

**■ ಕೆ.ಆರ್. ಉಮಾದೇವಿ ಉರಾಳ**

ಕೋಪೆನ್‌ಹೇಗನ್ ಎನ್ನುವ ಈ ಸುಂದರ ನಗರದಲ್ಲಿ ಎಲ್ಲೆಲ್ಲಿ ನೋಡಿದರೂ ಅಲ್ಲೆಲ್ಲ ಬಾಲ್ಟಿಕ್ ಸಮುದ್ರವನ್ನು ಊರೊಳಗೇ ತರುವ ಕಾಲುವೆಗಳು. ಮೇಲಿನ ಸೇತುವೆಗಳೆಡೆಯಲ್ಲಿನ ಬೃಹತ್ ವಿಗ್ರಹಗಳು. ಜಲಯಾನನಿರತ ದೋಣಿಗಳು. ವೈಶಿಷ್ಟ್ಯಪೂರ್ಣ ವಾಸ್ತು ಶೈಲಿಯ ಅರಮನೆಗಳು, ಕೋಟೆಕೊತ್ತಳಗಳು ಮತ್ತು ಚರ್ಚುಗಳು. ಇವೆಲ್ಲವನ್ನೂ ಮೀರಿ ಪ್ರವಾಸಿಗರನ್ನು ದಂಗುಬಡಿಸುವುದು ಈ ಬೃಹತ್ ನಗರದಲ್ಲಿ ಎಲ್ಲೆಲ್ಲೂ ಕಂಡುಬರುವ ಸೈಕಲ್ ಸವಾರರು!

ಎಳೆಯ ಮಕ್ಕಳಿಂದ ವೃದ್ಧರವರೆಗೆ ಎಲ್ಲರೂ ಸೈಕಲ್‌ನಲ್ಲಿ ಸಂಚರಿಸುವ ವಿಭಿನ್ನ ದೃಶ್ಯಗಳು ಪ್ರವಾಸಿಗರನ್ನು ಸೆಳೆಯುತ್ತವೆ. ಈ ಸೈಕಲ್ ಸವಾರರೇ ಡೆನ್ಮಾರ್ಕ್‌ನ ರಾಜಧಾನಿ ಕೋಪೆನ್‌ಹೇಗನ್‌ನ ವಿಶಿಷ್ಟತೆ. ನಗರದ ಜನಸಂಖ್ಯೆಗಿಂತ ಜಾಸ್ತಿ ಸೈಕಲ್‌ಗಳನ್ನು ಹೊಂದಿರುವ ಕೋಪೆನ್‌ಹೇಗನ್ ನಿಜಕ್ಕೂ 'ಸೈಕಲ್ ನಗರಿ'. ಈ ಸೈಕಲ್ ಪ್ರೀತಿಯು ಡೇನರ ಸಂಸ್ಕೃತಿಯ ಒಂದು ಭಾಗವೇ ಆಗಿ ಇಂದು ಪ್ರಪಂಚದ ಅತಿ ಮುಖ್ಯ ಸೈಕಲ್‌ಸ್ನೇಹಿ ನಗರವಾಗಿ ರೂಪುಗೊಂಡಿದೆ ಕೋಪೆನ್‌ಹೇಗನ್. ಇಲ್ಲಿ ಕಣ್ಸೆಳೆಯುವ ಮತ್ತೊಂದು ದೃಶ್ಯ, ಎಲ್ಲೆಲ್ಲೂ ಜನರು ತಮ್ಮ ನಾಯಿಗಳೊಂದಿಗೆ ಸಂಚರಿಸುವುದು. ನಾಯಿಗಳು ಕೂಡ ಡೇನರ ಕುಟುಂಬ ಜೀವನದ ಅವಿಭಾಜ್ಯ ಅಂಗವಾಗಿವೆ.

ಕೋಪೆನ್‌ಹೇಗನ್ ನಗರ ಪ್ರವಾಸದ ನಮ್ಮ ಮಾರ್ಗದರ್ಶಿ ಲೋವಾ ಉತ್ತಮ ಮಾತುಗಾರ್ತಿ. ನಮಗೆ ಡೇನಿಷ್ ಪಾರ್ಲಿಮೆಂಟ್, ರಾಣಿಯ ನಿವಾಸ ಅಮೇಲಿಯನ್‌ಬರ್ಗ್ ಅರಮನೆ, ನಗರದ ಹೆಗ್ಗುರುತು ಲಿಟ್ಲ್ ಮರ್ಮೈಡ್, ಇವುಗಳನ್ನೆಲ್ಲ ಉತ್ಸಾಹದಿಂದ ತೋರಿಸಿದಳು. ಕೈಗಾರಿಕೆಗಳಿಗೂ ಮಿಗಿಲಾಗಿರುವ ಅಲ್ಲಿನ ಹೈನುಗಾರಿಕೆ, ಸಾಗರಿಕ ಉದ್ಯಮಗಳೇ ಪ್ರಧಾನವಾಗಿರುವ ಸಮುದ್ರ ಜನಾಂಗ ಡೇನರ ಜೀವನಶೈಲಿ, ಅದರಿಂದಾಗಿ ಅಲ್ಲಿನ ಬಂದರುಗಳ ನೀರು ಕೂಡ ಶುದ್ಧವಾಗಿರುವುದು, ಸಮುದ್ರವನ್ನು ಹಿಂದೊತ್ತಿ ಕೋಪೆನ್‌ಹೇಗನ್ ನಗರವನ್ನು ರೂಪಿಸಿದ ಬಗೆ, ಡೇನರ ಸೈಕಲ್ ಪ್ರೀತಿ, ಶ್ವಾನಮೋಹ ಎಲ್ಲದರ ಕುರಿತು ಹೇಳುತ್ತಲೇ ಇದ್ದಳು. 'ಇಲ್ಲಿ ಮಕ್ಕಳಿಗೆ ನಡಿಗೆ ಬರುತ್ತಲೇ ಸೈಕಲ್ ಕಲಿಸುತ್ತಾರೆ. ಜನಸಾಮಾನ್ಯರು ಮಾತ್ರವಲ್ಲದೆ ಎಂಪಿಗಳು, ಮಂತ್ರಿಗಳು, ಕೊನೆಗೆ ಯುವರಾಜ ಕೂಡ ಸೈಕಲ್ ಸವಾರಿ ಇಷ್ಟಪಡುತ್ತಾನೆ' ಎಂದು ಅಭಿಮಾನದಿಂದ ಹೇಳಿಕೊಂಡಳು.

## ಸುರಕ್ಷಿತ ಸಾರಿಗೆ

ವ್ಯಾಪಕವಾದ ವ್ಯವಸ್ಥಿತವಾದ ಮತ್ತು ಸುರಕ್ಷಿತವಾದ ಸೈಕಲ್ ಪಥಗಳು ಇವುಗಳೆಲ್ಲ ಅಲ್ಲಿ ಸೈಕಲ್ ಸವಾರಿಯನ್ನು ಜನಪ್ರಿಯಗೊಳಿಸಿವೆ. ರಸ್ತೆಗಳ ಎರಡೂ ಬದಿಗಳಲ್ಲಿ ಸೈಕಲ್ ಸವಾರರಿಗೆ ಮೀಸಲಾದ ಪಥಗಳಿವೆ, ಸೂಚನಾ ಫಲಕಗಳಿವೆ.

